# ಗುಂಜನ್ ಸಕ್ಸೇನಾ

‘ಗುಂಜನ್ ಸಕ್ಸೇನಾ – ದಿ ಕಾರ್ಗಿಲ್ ಗರ್ಲ್’ ಚಲನಚಿತ್ರ ‘ನೆಟ್‌ಫ್ಲಿಕ್ಸ್’ನಲ್ಲಿ ಇದೇ ತಿಂಗಳಲ್ಲಿ ಬಿಡುಗಡೆಯಾಗಿದ್ದು ಅನೇಕ ಕಾರಣಗಳಿಗಾಗಿ ಸುದ್ದಿ ಮಾಡಿದೆ. ಚಿತ್ರ ಬಿಡುಗಡೆ ಆಗುತ್ತಿದ್ದಂತೆ, ಭಾರತೀಯ ವಾಯುಪಡೆ ಆಕ್ಷೇಪಣೆ ಎತ್ತಿದೆ. ‘ಮಾಜಿ ಫ್ಲೈಟ್ ಲೆಫ್ಟಿನೆಂಟ್ ಗುಂಜನ್ ಸಕ್ಸೇನಾ ಅವರ ತೆರೆಯ ಮೇಲಿನ ಪಾತ್ರವನ್ನು ವೈಭವೀಕರಿಸುವ ಉದ್ದೇಶದಿಂದ ಕೆಲವು ದೃಶ್ಯಗಳನ್ನು ವಾಯುಪಡೆಯಲ್ಲಿ ಮಹಿಳಾ ವಿರೋಧಿ ‘ವರ್ಕ ಕಲ್ಚರ್’ ಇದೆಯೆಂಬಂತೆ ತಪ್ಪಾದ ರೀತಿಯಲ್ಲಿ ಬಿಂಬಿಸಲಾಗಿದೆ. ವಾಯುಪಡೆ ಒಂದು ಸಂಸ್ಥೆಯಾಗಿ ಲಿಂಗ ತಾರತಮ್ಯವಿಲ್ಲದೆ ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ನೋಡಿಕೊಂಡಿದೆ’ ಎಂದು ವಾಯುಪಡೆ ಅಧಿಕಾರಿಗಳು ತಿಳಿಸಿದ್ದಾರೆ.

ವಾಯುಪಡೆಯಲ್ಲಿ ಗುಂಜನ್ ಅವರ ಬ್ಯಾಚ್‌ಮೇಟ್ ಆಗಿದ್ದ ಶ್ರೀವಿದ್ಯಾ ರಾಜನ್, ‘ಚಿತ್ರದಲ್ಲಿ ತೋರಿಸಿರುವಂತೆ ಉದ್ಧಾಮ್‌ಪುರ ವಾಯುಸೇನೆಯ ‘ಬೇಸ್’ಗೆ ಗುಂಜನ್ ಏಕಾಂಗಿ ಮಹಿಳೆಯಾಗಿ ಬಂದಿರಲಿಲ್ಲ. ನಾವಿಬ್ಬರೂ ಆ ಬೇಸ್‌ಗೆ ಜೊತೆಯಾಗಿ ಬಂದಿದ್ದೆವು’ ಎಂದು ಹೇಳಿದ್ದಾರೆ. ಚಿತ್ರದಲ್ಲಿ ತನ್ನ ಇರುವನ್ನೇ ಅಳಿಸಿಹಾಕಿರುವುದು ಶ್ರೀವಿದ್ಯಾ ಅವರಿಗೆ ಬೇಸರ ತರಿಸಿದೆ. ಜೊತೆಗೇ, ತಾನು ಕಾರ್ಗಿಲ್ ರಣಭೂಮಿಯನ್ನು ಹೊಕ್ಕ ಪ್ರಥಮ ಮಹಿಳಾ ಪೈಲೆಟ್ ಎಂದೂ ತಿಳಿಸಿದ್ದಾರೆ.

ಇಸವಿ 1999, ಮೇ ತಿಂಗಳಿಂದ ಜುಲೈ ತಿಂಗಳವರೆಗೆ ಭಾರತ ಮತ್ತು ಪಾಕಿಸ್ತಾನದ ನಡುವೆ ಕಾಶ್ಮೀರದ ಕಾರ್ಗಿಲ್ ಪ್ರದೇಶದಲ್ಲಿ ಯುದ್ಧ ನಡೆಯಿತು. ಎಲೆಕ್ಟ್ರಾನಿಕ್ ಮಾಧ್ಯಮಗಳ ಕಾಲವಾದ ಕಾರಣ, ಆ ಯುದ್ಧ ಎಲ್ಲಿಲ್ಲದ ರೀತಿಯಲ್ಲಿ ವರದಿಯಾಗಿತ್ತು. ಯುದ್ಧ ಮುಗಿದ ಹೊತ್ತು ವಾಯುಪಡೆ ಮಾಧ್ಯಮಗಳಿಗೆ ‘ಗುಂಜನ್ ರಣಭೂಮಿಗೆ ಕಾಲಿಟ್ಟ ಪ್ರಥಮ ಮಹಿಳಾ ಪೈಲೆಟ್’ ಎಂದು ತಿಳಿಸಿತ್ತು. ಅಕ್ಟೋಬರ್ 1999ರಲ್ಲಿಯೇ, ಗುಂಜನ್ ಸಕ್ಸೇನಾ ಅವರು ‘ಸಾವಿ’ ಪತ್ರಿಕೆಯ ಮುಖಪುಟದಲ್ಲಿ ರಾರಾಜಿಸಿದರು. ‘ಪತ್ರಿಕೆಗಳು ಹೇಳುವ ತನಕ ನಾನು ಯುದ್ಧರಂಗದಲ್ಲಿ ಹಾರಿದ ವಾಯುಸೇನೆಯ ಪ್ರಥಮ ಮಹಿಳಾ ಪೈಲೆಟ್ ಎಂಬುದು ನನಗೆ ತಿಳಿದಿರಲಿಲ್ಲ’ ಎಂದು ಕೂಡಾ ಆ ಮುಖಪುಟ ಸಂದರ್ಶನದಲ್ಲಿ ಅವರು ತಿಳಿಸಿದ್ದರು. ಅದೇ ಡಿಸೆಂಬರ್ 1999ರಲ್ಲಿ, ‘ಇಂಡಿಯನ್ ವಿಮೆನ್ ಪೈಲೆಟ್ಸ್ ಅಸೋಸಿಯೇಶನ್’ನ ‘ದಿ ಫ್ಲೈಯಿಂಗ್ ಪ್ರಿನ್ಸೆಸ್’ ಪತ್ರಿಕೆ ಮತ್ತೆ ಯುದ್ಧರಂಗಕ್ಕೆ ಕಾಲಿಟ್ಟ ವಾಯುಪಡೆಯ ಪ್ರಥಮ ಮಹಿಳೆ ಗುಂಜನ್ ಎಂದು ಪುನರಾವರ್ತಿಸಿತ್ತು. ಲಿಮ್ಕಾ ದಾಖಲೆಗಳ ಪುಸ್ತಕದಲ್ಲಿಯೂ ಇದೇ ವಿಷಯ ನಮೂದಾಗಿದೆ. ಆಗಷ್ಟೇ ಕಾರ್ಗಿಲ್ ಯುದ್ಧ ಮುಗಿದಿತ್ತು. ವಾಯುಪಡೆಯೂ ಸೇರಿದಂತೆ ಎಲ್ಲರ ನೆನಪು ಹಚ್ಚ ಹಸಿರಾಗಿದ್ದ ಸಮಯವದು. ಆಗ ಯಾವ ವಿವಾದವೂ ತಲೆ ಎತ್ತಿರಲಿಲ್ಲ. ಇಂದು 21 ವರ್ಷಗಳ ನಂತರ ಗುಂಜನ್ ಯುದ್ಧರಂಗಕ್ಕೆ ಪ್ರವೇಶಿಸಿದ ವಾಯುಪಡೆಯ ಪ್ರಥಮ ಮಹಿಳೆ ಎಂಬ ಬಗ್ಗೆ ವಿವಾದಗಳು ಎದ್ದಿವೆ. ‘ಯುದ್ಧರಂಗಕ್ಕೆ ನಾನು ಹಾರಿದ್ದು ಯಾವುದೇ ದಾಖಲೆ ನಿರ್ಮಿಸಲೆಂದಲ್ಲ. ಅದು ನನ್ನ ಕರ್ತವ್ಯವಾಗಿತ್ತು. ಗಾಯಗೊಂಡ ಯೋಧರನ್ನು ಸುರಕ್ಷಣೆಗೆ ಕರೆತಂದ ಕೆಲಸ ತನಗೆ ಅತ್ಯಂತ ತೃಪ್ತಿ ನೀಡಿತು’ ಎಂದು ಗುಂಜನ್ ಹೇಳಿದ್ದಾರೆ.

‘ಬೆಳ್ಳಿತೆರೆ’ಯ ಪಾತ್ರದ ವಸ್ತುವಾದ ಕಾರಣ, ಈ ಎಲ್ಲ ವಾದ ವಿವಾದಗಳ ನಡುವೆ, ಅತಿ ಮುಖ್ಯವಾದ ವೈಮಾನಿಕ ರಂಗದ ಮಹಿಳೆಯರ ಸಾಧನೆ, ಅದರಲ್ಲೂ ಮಿಲಿಟರಿ ವೈಮಾನಿಕ ರಂಗವಾದ ವಾಯುಪಡೆಯಲ್ಲಿ ಆಕೆಯ ಸಾಮರ್ಥ್ಯ, ತೆರೆಯ ಹಿಂದೆಲ್ಲೋ ಸರಿದುಹೋಗಿದೆ. ಯಾರು ಪ್ರಥಮರು ಎಂಬುದು ಮುಖ್ಯವಲ್ಲ; ವಾಯುಪಡೆಗೆ ಸೇರಿದ ಆರಂಭದ ಮಹಿಳೆಯರ ಸಾಹಸ ಮುಖ್ಯವಾದದ್ದು. ಇಸವಿ 1992ರಲ್ಲಿ ವಾಯುಪಡೆ ಮಹಿಳೆಯರಿಗೆ



ಉದ್ಧಾಮ್‌ಪುರ ವಾಯುಸೇನೆಯ ಬೇಸ್‌ನಲ್ಲಿ ಶ್ರೀವಿದ್ಯಾ ಹಾಗೂ ಗುಂಜನ್ ಸಕ್ಸೇನಾ

